**ದಿನಾಂಕಃ 13-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಬಿ ಸಿ ಜೆ ವಕೀಲರಿಂದಃ**

ನಾನು ಅರ್ಜಿದಾರನನ್ನು ಪರೀಕ್ಷೆ ಮಾಡಿ ಅವರಿಗೆ ನಿ ಪಿ - 6 ರಂತೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿದ್ದೇನೆ. ಸಾಕ್ಷಿಯೂ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ -6 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ವಿ ಎಸ್ ಎ ವಕೀಲರಿಂದಃ**

ಅಪಘಾತವಾದ ಕೂಡಲೇ ನಾನು ಅರ್ಜಿದಾರರನ್ನು ಪರೀಕ್ಷೆ ಮಾಡಿರುವುದಿಲ್ಲ. ಈ ಪ್ರಕರಣದಲ್ಲಿ ನನಗೆ ಸಾಕ್ಷಿ ನುಡಿಯಲು ಸಮನ್ಸ ಬಂದಿರುವುದಿಲ್ಲ. ನಾನು ಸುಮಾರು ಪ್ರಕರಣಗಳಲ್ಲಿ ಅಂಗನ್ಯೂನತೆ ಪ್ರಮಾಣ ಪತ್ರ ನೀಡಿರುತ್ತೇನೆ. ನಾನು ಎಸ್ ಎಸ್ ಐ ಎಮ್ ಎಸ್ ಆಸ್ಪತ್ರೆಯಲ್ಲಿ ಕಾಸ್ಮಟಿಕ್ ಸರ್ಜನ್ ಎಂದು ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಕರ್ನಾಟಕ ಮೆಡಿಕಲ್ ಕೌನ್ಸಿಲ್ ನಲ್ಲಿ ಕಾಸ್ಮಟಿಕ್ ಸರ್ಜನ್ ಅಂತಾ ವೃತ್ತಿ ಮಾಡಲು 35304 ಸಂಖ್ಯೆ ಅಡಿಯಲ್ಲಿ ಲೈಸೆನ್ಸ ನೀಡಲಾಗಿದೆ ಎಂದರೆ ಸರಿ. ನಾನು ಎಲುಬು ಕೀಲು ತಜ್ಞನಾಗಿ ವೃತ್ತಿ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅಂಗನ್ಯೂನತೆ ಮಾಡುವಾಗ ಪರೀಕ್ಷೆ ಮಾಡಿರುತ್ತೇನೆ. ಆಗ ಡಿಸ್ಚಾರ್ಜ ಸಮ್ಮರಿ ಹಾಗೂ ಗಾಯದ ಪ್ರಮಾಣ ಪತ್ರ ನೋಡಿರುತ್ತೇನ. ಸದರಿ ದಾಖಲೆಗಳನ್ನು ನೀಡಿರುವ ವೈದ್ಯರು ಅರ್ಜಿದಾರರ ಕ್ಷ ಕಿರಣ ತೆಗೆದಿರುತ್ತಾರೆ. ಅವುಗಳನ್ನು ನಾನು ನೋಡಿರುವುದಿಲ್ಲ. ಅಂಗನ್ಯೂನತೆ ಪ್ರಮಾಣ ಪತ್ರ ನೀಡುವಾಗ ಎಕ್ಸರೆಗಳು ದಾಖಲೆಗಳು ಪ್ರಮುಖ ದಾಖಲೆಗಳಾಗುತ್ತವೆ ಎಂದರೆ ಸರಿ. ಅಂಗನ್ಯೂನತೆ ಪ್ರಮಾಣ ಪತ್ರ ನೀಡುವಾಗ ಕೇಂದ್ರ ಸರ್ಕಾರದ ಮಾರ್ಗಸೂಚನೆಗಳಲ್ಲಿರುವ ಸೂತ್ರಗಳನ್ನು ಅಳವಡಿಸಿ ಅಂಗನ್ಯೂನತೆ ನೀಡಿರುತ್ತೇನೆ. ಆ ಸೂತ್ರದಡಿಯಲ್ಲಿ ಎ ಎಂದರೆ ಹೆಚ್ಚಿನ ಮೌಲ್ಯ ಬಿ ಎಂದರೆ ಕಡಿಮೆ ಮೌಲ್ಯ ಎಂದರೆ ಸರಿ. ಅರ್ಜಿದಾರರಿಗೆ ಮೂಳೆ ಮುರಿತ ಇತ್ತು ಮತ್ತು ಅವರಿಗೆ ಕೀಲಿನ ಚಲನವಲನದಲ್ಲಿ ನಿರ್ಭಂದತೆ ಇತ್ತು. ಎ ಮತ್ತು ಬಿ ಅಳತೆ ಮಾಡುವಾಗ ಕೀಲಿನ ನಿರ್ಭಂದತೆಯನ್ನು ಅಳತೆ ಮಾಡಬೇಕಾಗುತ್ತದೆ ಎಂದರೆ ಸರಿ. ಕೀಲಿನ ಚಲನವಲನ ಅಳತೆ ಮಾಡಬೇಕಾದರೆ ಸಾಮಾನ್ಯ ಕ್ರಿಯಾಶೀಲ , ನಷ್ಟದ ಅಳತೆಗಳನ್ನು ಮಾಡಬೇಕು ಎಂದರೆ ಸರಿ. ಆ ಬಗ್ಗೆ ನಾನುಪ್ರತ್ಯೆಕವಾಗಿ ಅಳತೆ ಮಾಡುವಾಗ ಅಂಗನ್ಯೂನತೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಎ

ಮತ್ತು ಬಿ ಯ ಅಳತೆ ನೋಡಬೇಕಾದರೆ ಸರಾಸರಿಯ ನಷ್ಟ ಎಷ್ಟು ಇತ್ತು ಹಾಗೂ ಮಾಂಸಖಂಡಗಳ ಶಕ್ತಿ ಎಷ್ಟು ಇತ್ತು ಎಂದು ನೋಡ ಬೇಕಾಗುತ್ತದೆ ಎಂದರೆ ಸರಿ. ಖಂಡಗಳ ಸರಾಸರಿ ನಷ್ಟದ ಅಳತೆ ಮತ್ತು ಮಾಂಸಖಂಡಗಳ ಶಕ್ತಿ ಹೀನತೆ ಅಳತೆ ಎಷ್ಟು ಎಂದು ನಾನು ನಮೂದಿಸಿಲ್ಲ ಎಂದರೆ ಸರಿ. ಸದರಿ ಈ ಮೇಲೆ ಹೇಳಿದ ನ್ಯೂನತೆಗಳ ಪ್ರಮಾಣ ಅರ್ಜಿದಾರರಲ್ಲಿ ಕಂಡು ಬರದೇ ಇರುವುದರಿಂದ ಅವುಗಳನ್ನು ಅಂಗನ್ಯೂನತೆ ಪ್ರಮಾಣ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಎ ಮತ್ತು ಬಿ ಪ್ರಮಾಣದಲ್ಲಿ ತಪ್ಪು ಲೆಕ್ಕಾಚಾರ ಮಾಡಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಬಲಕಾಲು ಶಾರ್ಟನಿಂಗ ಆಗಿದೆ ಅಂತಾ ಹೇಳಿದ್ದು ಅದರ ಪ್ರಮಾಣ ಅಂಗನ್ಯೂನತ ಪ್ರಮಾಣ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿ. ಅವರಿಗೆ ಶಾರ್ಟನಿಂಗ ಆಗದೇ ಇರುವುದರಿಂದ ಪ್ರಮಾಣ ಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಅವರಿಗೆ ಆದ ಮೂಳೆ ಮುರಿತದ ಕೂಡುವಿಕೆ ಸೊಟ್ಟದಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕೂಡಲು , ನಡೆದಾಡಲು ಆಗುವುದಿಲ್ಲ ಎಂದು ಅರ್ಜಿದಾರರ ಹೇಳಿಕೆ ಮೇರೆಗೆ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಶೇ. 40 ರಷ್ಟು ನೀಡಿದ ಅಂಗನೂನತೆಯು ಅರ್ಜಿದಾರರ ನಿರ್ದಿಷ್ಟ ಭಾಗಕ್ಕೆ ಇರುತ್ತದೆ ಎಂದರೆ ಸರಿ. ಸಂಪೂರ್ಣ ದೇಹಕ್ಕೆ ಹೋಲಿಕೆ ಮಾಡಿದಾಗ ಅವರಿಗೆ ಆದ ಅಂಗನ್ಯೂನತೆ ಸ್ವಲ್ಪ ಕಡಿಮೆ ಆಗುತ್ತದೆ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನತೆ ಆಗದಿದ್ದರೂ ಸಹ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.